# All India Radio: Bangalore
# National Bulletins In Kannada
# 06.06.2025 / 19.35 hrs
### ಆಕಾಶವಾಣಿ, ಬೆಂಗಳೂರು
### ರಾಷ್ಟ್ರೀಯ ವಾರ್ತೆಗಳು

## 06.06.2025 / 19.35  hrs

**<><*<><>*><>**

**ಮುಖ್ಯಾಂಶಗಳು**

**೧. ಜಮ್ಮು-ಕಾಶ್ಮೀರದಲ್ಲಿ ೪೬ ಸಾವಿರ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ**

**೨. ಆಗಸ್ಟ್ ೩ರಂದು ಒಂದೇ ಪಾಳಿಯಲ್ಲಿ ನೀಟ್ -ಪಿಜಿ ಪರೀಕ್ಷೆ**

**೩. ಮುಂಬೈ ದಾಳಿ ಆರೋಪಿ ತಹವ್ವೂರ ರಾಣಾ ನ್ಯಾಯಾಂಗ ಬಂಧನ ವಿಸ್ತರಣೆ**

**೪. ಪರಾರಿಯಾಗಿರುವ ಉದ್ಯಮಿ ಮೆಹುಲ್ ಚೋಕ್ಸಿ ಬ್ಯಾಂಕ್ ಖಾತೆ, ಷೇರುಗಳ ಮುಟ್ಟುಗೋಲಿಗೆ ಸೆಬಿ ಆದೇಶ**

**<><*<><>*><>**

ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಈಗ ದೇಶವು ರೈಲ್ವೆ ಜಾಲದ ಮೂಲಕ ಸಂಪರ್ಕ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಜಮ್ಮು-ಕಾಶ್ಮೀರದ ಕಟ್ರಾದಲ್ಲಿಂದು ಚೆನಾಬ್ ಸೇತುವೆ ಮತ್ತು ಅಂಜಿ ಖಾದ್ ಸೇತುವೆಯನ್ನು ಪ್ರಧಾನಿ ಉದ್ಘಾಟಿಸಿದರು. ಇದೇ ವೇಳೆ ೪೬ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದರು. ಈ ವೇಳೆ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಜಮ್ಮು-ಕಾಶ್ಮೀರವು ಭಾರತದ ಕಿರೀಟವಾಗಿದೆ. ಚೆನಾಬ್ ಮತ್ತು ಅಂಜಿ ಖಾದ್ ಸೇತುವೆಗಳು ಜಮ್ಮು ಮತ್ತು ಕಾಶ್ಮೀರದ ಸಮೃದ್ಧಿಗೆ ದ್ವಾರಗಳಾಗಿ ಕಾರ್ಯನಿರ್ವಹಿಸಲಿವೆ ಎಂದು ಹೇಳಿದರು. ಅನೇಕ ಕಾಶ್ಮೀರಿ ಕುಟುಂಬಗಳಿಗೆ ಜೀವನೋಪಾಯ ಒದಗಿಸುವ ಪ್ರವಾಸೋದ್ಯಮ ವಲಯವನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನವು ಪಹಲ್ಗಾಮ್‌ನಲ್ಲಿ ದಾಳಿ ಮಾಡಿದೆ ಎಂದು ಪ್ರಧಾನಿ ಹೇಳಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೬ ಸೆಕೆಂಡ್ಸ್)**

ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಸೇತುವೆ ನಿರ್ಮಾಣದಲ್ಲಿ ಕೊಡುಗೆ ನೀಡಿದ ಎಂಜಿನಿಯರ್‌ಗಳು ಹಾಗೂ ಕಾರ್ಮಿಕರೊಂದಿಗೆ ಸಂವಾದ ನಡೆಸಿದರು. ನಂತರ,  ಕಟ್ರಾದಿಂದ ಶ್ರೀನಗರದವರೆಗೆ ಹಾಗೂ ಶ್ರೀನಗರದಿಂದ ಕಟ್ರಾಗೆ ಸಂಚರಿಸುವ ಎರಡು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಿದರು.  ಅಲ್ಲದೇ, ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ೨೭೨ ಕಿಲೋಮೀಟರ್ ಉದ್ದದ ಈ ಯೋಜನೆಯನ್ನು ಸುಮಾರು ೪೪ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಯೋಜನೆಯು ಸಂಪೂರ್ಣ ವಿದ್ಯುದ್ದೀಕರಣಗೊಂಡ ವಿಭಾಗವಾಗಿದ್ದು, ೩೬ ಸುರಂಗಗಳು ಮತ್ತು ೯೪೩ ಸೇತುವೆಗಳನ್ನು ಒಳಗೊಂಡಿದೆ.

**<><*<><>*><>**

ಬರುವ ಆಗಸ್ಟ್ ೩ ರಂದು ಒಂದೇ ಪಾಳಿಯಲ್ಲಿ ನೀಟ್-ಪಿಜಿ ೨೦೨೫ ಪರೀಕ್ಷೆಯನ್ನು ನಡೆಸಲು ಸುಪ್ರೀಂ ಕೋರ್ಟ್, ರಾಷ್ಟ್ರೀಯ ಪರೀಕ್ಷಾ ಮಂಡಳಿ-ಎನ್‌ಬಿಇ ಗೆ ಅನುಮತಿ ನೀಡಿದೆ. ಪರೀಕ್ಷೆಯನ್ನು ಆರಂಭದಲ್ಲಿ ಜೂನ್ ೧೫ ಕ್ಕೆ ನಿಗದಿಪಡಿಸಲಾಗಿತ್ತು. ಪರೀಕ್ಷೆಯನ್ನು ನಡೆಸಲು ಹೆಚ್ಚಿನ ಕಾಲಾವಕಾಶ ಕೋರಿ ಮಂಡಳಿ ಅರ್ಜಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ  ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಆಗಸ್ಟೀನ್ ಜಾರ್ಜ್ ಮಸಿಹ್

ಅವರಿದ್ದ ನ್ಯಾಯಪೀಠವು ಈ ಆದೇಶ ಹೊರಡಿಸಿದೆ. ಇದಕ್ಕಿಂತ ಹೆಚ್ಚಿನ ಸಮಯವನ್ನು ನೀಡಲಾಗುವುದಿಲ್ಲ ಎಂದು ನ್ಯಾಯಾಲಯ ಇದೇ ವೇಳೆ ಸ್ಪಷ್ಟಪಡಿಸಿದೆ.

<><*<><>*><>

ನವದೆಹಲಿಯಲ್ಲಿಂದು 'ಭಾರತೀಯ ಭಾಷಾ ಅನುಭಾಗ್' ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ವಿದೇಶಿ ಭಾಷೆಗಳ ಪ್ರಭಾವದಿಂದ ಆಡಳಿತವನ್ನು ಮುಕ್ತಗೊಳಿಸುವ ದಿಕ್ಕಿನಲ್ಲಿ ಒಂದು ಮೈಲಿಗಲ್ಲಾಗಿದೆ. ಚಿಂತನೆ, ವಿಶ್ಲೇಷಣೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳು ಮಾತೃಭಾಷೆಯಲ್ಲಿದ್ದರೆ ಮಾತ್ರ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದು ಎಂದು ಹೇಳಿದರು. ಎಲ್ಲಾ ಸ್ಥಳೀಯ ಭಾಷೆಗಳನ್ನು ಬಲಪಡಿಸುವ ಮೂಲಕ ಮಾತ್ರ ಭಾರತವು ಇನ್ನೂ ಶಾಶ್ವತ ವೈಭವದ ಸ್ಥಾನವನ್ನು ತಲುಪುತ್ತದೆ. 'ಭಾರತೀಯ ಭಾಷಾ ಅನುಭಾಗ್' ಭಾರತದ ಭಾಷಾ ವೈವಿಧ್ಯತೆಯನ್ನು ಒಳಗೊಂಡಂತೆ ಎಲ್ಲಾ ಭಾಷೆಗಳಿಗೆ ಬಲವಾದ ಮತ್ತು ಸಂಘಟಿತ ವೇದಿಕೆಯನ್ನು ಒದಗಿಸುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.

<><*<><>*><>

ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ನೀತಿ ಸಮಿತಿ ಇಂದು ಮಹತ್ವದ ತೀರ್ಮಾನ ತೆಗೆದುಕೊಂಡಿದ್ದು, ರೆಪೋ ದರವನ್ನು ೫೦ ಮೂಲಾಂಶ ಕಡಿತಗೊಳಿಸಿ ೬ ರಿಂದ ೫.೫ ಕ್ಕೆ ಇಳಿಸಿದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಘೋಷಿಸಿದ್ದಾರೆ. ಮೂರು ದಿನಗಳಿಂದ ನಡೆಯುತ್ತಿದ್ದ ಆರ್ಥಿಕ ನೀತಿ ಸಮಿತಿ - ಎಂಪಿಸಿಯ ಸಭೆಯ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಆರ್ಥಿಕ ವರ್ಷ ೨೦೨೫-೨೬ಕ್ಕೆ ಹಣದುಬ್ಬರ ದರವನ್ನು ಶೇಕಡ ೪ ರಿಂದ ಶೇಕಡ ೩.೭ಕ್ಕೆ ಇಳಿಸಲಾಗಿದೆ. ಆರ್‌ಬಿಐ ಪ್ರಸಕ್ತ ಆರ್ಥಿಕ ವರ್ಷಕ್ಕೆ ದೇಶದ ಮೂಲ ಜಿಡಿಪಿ ಬೆಳವಣಿಗೆ ದರವನ್ನು ಶೇಕಡ ೬.೫ ರಷ್ಟು ಇರಲಿದೆ ಎಂದು ಅಂದಾಜಿಸಿದ್ದು, ಇದನ್ನು ಹಿಂದಿನ ಮುನ್ನೋಟದಂತೆಯೇ ಉಳಿಸಲಾಗಿದೆ ಎಂದು ತಿಳಿಸಿದರು. ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದು, ಬಾಹ್ಯ ಹಾಗೂ ಆಂತರಿಕ ಹೂಡಿಕೆದಾರರಿಗೆ ಆಕರ್ಷಕ ಅವಕಾಶಗಳನ್ನು ನೀಡುತ್ತಿದೆ. ರೈತರ ಬೆಳೆಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಿದ್ದು, ಆಹಾರದ ಬೆಲೆ ಸ್ಥಿರವಾಗಲಿದೆ ಎಂದು ಭರವಸೆ ವ್ಯಕ್ತಪಡಿಸಲಾಗಿದೆ.

<><*<><>*><>

೨೬/೧೧ ಮುಂಬೈ ದಾಳಿ ಆರೋಪಿ ತಹವ್ವೂರ್ ರಾಣಾ ನ್ಯಾಯಾಂಗ ಬಂಧನ ಅವಧಿಯನ್ನು ದೆಹಲಿ ನ್ಯಾಯಾಲಯ ಇಂದು ಜೂನ್ ೯ ರವರೆಗೆ ವಿಸ್ತರಿಸಿದೆ. ಈ ಹಿಂದೆ ವಿಧಿಸಲಾಗಿದ್ದ ನ್ಯಾಯಾಂಗ ಬಂಧನ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಇಂದು ರಾಣಾನನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ, ವಿಶೇಷ ನ್ಯಾಯಾಧೀಶರಾದ ಚಂದರ್‌ಜಿತ್ ಸಿಂಗ್ ಈ ಆದೇಶ ಹೊರಡಿಸಿದ್ದಾರೆ.

<><*<><>*><>

ಪರಾರಿಯಾಗಿರುವ ಉದ್ಯಮಿ ಮೆಹುಲ್ ಚೋಕ್ಸಿ ಅವರ ಬ್ಯಾಂಕ್ ಖಾತೆಗಳು, ಮ್ಯೂಚುವಲ್ ಫಂಡ್‌ಗಳು ಮತ್ತು ಷೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿ -ಸೆಬಿ ಆದೇಶಿಸಿದೆ. ಈ ಮೂಲಕ ೨ ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡುವಂತೆ ಸೂಚಿಸಿದೆ. ಗೀತಾಂಜಲಿ ಜೆಮ್ಸ್‌ನ ಷೇರುಗಳಲ್ಲಿ ಆಂತರಿಕ ವ್ಯಾಪಾರ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅವರಿಗೆ ವಿಧಿಸಲಾದ ದಂಡಕ್ಕೆ ಈ ಮೊತ್ತ ಸಂಬಂಧಿಸಿದೆ. ಗೀತಾಂಜಲಿ ಜೆಮ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮೆಹುಲ್ ಚೋಕ್ಸಿ ವಿರುದ್ಧ ವಂಚನೆ ಆರೋಪವಿದೆ. ಸೆಬಿ, ೨೦೨೨ರಲ್ಲಿ ಚೊಕ್ಸಿಗೆ ೧ ಕೋಟಿ ೫೦ ಲಕ್ಷ ರೂಪಾಯಿ ದಂಡ ವಿಧಿಸಿತ್ತು ಮತ್ತು ಸೆಕ್ಯುರಿಟೀಸ್ ಮಾರುಕಟ್ಟೆಯಲ್ಲಿ ಒಂದು ವರ್ಷದವರೆಗೆ ವ್ಯಾಪಾರ ಮಾಡುವುದನ್ನು ನಿಷೇಧಿಸಿತ್ತು. ಆದಾಗ್ಯೂ ಚೋಕ್ಸಿ ದಂಡವನ್ನು ಪಾವತಿಸಿರಲಿಲ್ಲ. ಇದರಿಂದಾಗಿ ಕಳೆದ ತಿಂಗಳು ಸೆಬಿ ಡಿಮ್ಯಾಂಡ್ ನೋಟಿಸ್ ಜಾರಿ ಮಾಡಿತ್ತು.

<><*<><>*><>

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಗರೀಬ್ ಕಲ್ಯಾಣ್ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಹಲವು ಪ್ರಮುಖ ಕ್ರಮಗಳನ್ನು ಕೈಗೊಂಡಿದೆ. ಕಳೆದ ದಶಕದಲ್ಲಿ, ಪರಂಪರೆಯಲ್ಲಿ ಶ್ರೀಮಂತ, ಅಭಿವ್ಯಕ್ತಿಯಲ್ಲಿ ವೈವಿಧ್ಯಮಯ, ಮತ್ತು ಜಾಗತಿಕ ತಲುಪಿನಲ್ಲೂ ಆತ್ಮವಿಶ್ವಾಸದಿಂದ ಕೂಡಿರುವ ಭಾರತವನ್ನು ನಿರ್ಮಿಸಿದ ನಿಜವಾದ ರಾಷ್ಟ್ರ ನಿರ್ಮಾತೃಗಳನ್ನು ಗೌರವಿಸುವ ದೃಷ್ಟಿಯಿಂದ ಸರ್ಕಾರ ಮಹತ್ವಪೂರ್ಣ ಹೆಜ್ಜೆಗಳನ್ನು ಇಟ್ಟಿದೆ. ದೇಶದ ಸ್ವಾತಂತ್ರ್ಯದ ೭೫ನೇ ವರ್ಷದ ಸಂಭ್ರಮವಾಗಿ ಆಯೋಜಿಸಲಾದ "ಆಜಾದಿ ಕಾ ಅಮೃತ ಮಹೋತ್ಸವದಂತಹ ಅಭಿಯಾನದಡಿ ದೇಶದ ತ್ಯಾಗ ಹಾಗೂ

ಸಾಧನೆಗಳನ್ನು ಸಾಂಸ್ಕೃತಿಕ ಮತ್ತು ದೇಶಭಕ್ತಿಯ ಕಾರ್ಯಕ್ರಮಗಳ ಮೂಲಕ ದೇಶಾದ್ಯಂತ ಆಚರಿಸಲಾಯಿತು. ಅನೇಕ ವರ್ಷಗಳಿಂದ ಬಾಕಿ ಇದ್ದ ಸ್ಮಾರಕಗಳು, ಉದಾಹರಣೆಗೆ ಪ್ರಧಾನ ಮಂತ್ರಿ ಸಂಗ್ರಹಾಲಯ, ನ್ಯಾಷನಲ್ ಪೊಲೀಸ್ ಸ್ಮಾರಕ, ಗಿರಿಜನ ಸ್ವಾತಂತ್ರ್ಯ ಹೋರಾಟಗಾರರ ವಸ್ತುಸಂಗ್ರಹಾಲಯಗಳು, ಭಾರತ ಮಂಡಪಂ ಮತ್ತು ಹೊಸ ಸಂಸತ್ ಭವನವನ್ನು ರಾಷ್ಟ್ರ ಏಕತೆಯ ಪ್ರತೀಕಗಳಾಗಿ ರೂಪಾಂತರಿಸಲಾಗಿದೆ. "ಏಕ ಭಾರತ್, ಶ್ರೇಷ್ಠ ಭಾರತ್" ಉಪಕ್ರಮದಡಿಯಲ್ಲಿ ಕಾಶಿ-ತಮಿಳ್ ಸಂಗಮಂ ಮತ್ತು ೬೬ ಕೋಟಿ ಭಕ್ತರ ಭಾರೀ ಭಾಗವಹಿಸುವಿಕೆಯೊಂದಿಗೆ ನಡೆದ ಮಹಾಕುಂಭ ೨೦೨೫ ಕಾರ್ಯಕ್ರಮಗಳು "ಏಕತೆಯಲ್ಲಿ ವೈವಿಧ್ಯತೆ"ಯನ್ನು ಉತ್ಸವದಂತೆ ಆಚರಿಸಿವೆ.

**<><*<><>*><>**

ಇಂಡೋನೇಷ್ಯಾ ಓಪನ್ ಸೂಪರ್-೧೦೦೦ ಟೆನಿಸ್‌ನಲ್ಲಿ ಭಾರತದ ಅಭಿಯಾನ ಇಂದು ಕೊನೆಗೊಂಡಿದೆ. ಜಕಾರ್ತದಲ್ಲಿ ನಡೆದ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಅಗ್ರ ಶ್ರೇಯಾಂಕಿತ ಡಬಲ್ಸ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ, ಮಲೇಷ್ಯಾದ ಮ್ಯಾನ್ ವೀ ಚೊಂಗ್ ಮತ್ತು ಟೀ ಕೈ ವುನ್ ವಿರುದ್ಧ ಪರಾಭವಗೊಂಡರು. ನಲವತ್ತು ನಿಮಿಷಗಳಿಗೂ ಹೆಚ್ಚು ಕಾಲ ನಡೆದ ಪಂದ್ಯದಲ್ಲಿ ಶೆಟ್ಟಿ ಮತ್ತು ರೆಡ್ಡಿ ೧೯-೨೧, ೧೬-೨೧ ಸೆಟ್‌ಗಳಿಂದ ಚೊಂಗ್ ಮತ್ತು ವುನ್ ವಿರುದ್ಧ ಸೋತರು.

**<><*<><>*><>**

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಷೇರು ಸಂವೇದಿ ಸೂಚ್ಯಂಕ- ಸೆನ್ಸೆಕ್ಸ್ ೭೪೭ ಅಂಕಗಳು ಏರಿಕೆಯಾಗಿದ್ದು, ದಿನದ ಅಂತ್ಯಕ್ಕೆ ೮೨ ಸಾವಿರದ ೧೮೯ ಅಂಕಗಳು ದಾಖಲಾಗಿದೆ. ಇದೇ ವೇಳೆ ರಾಷ್ಟ್ರೀಯ ಸಂವೇದಿ ಸೂಚ್ಯಂಕ-ನಿಫ್ಟಿ ೨೫೨ ಅಂಕಗಳು ಏರಿಕೆ ಕಂಡಿದ್ದು, ದಿನದ ಅಂತ್ಯಕ್ಕೆ ೨೫ ಸಾವಿರದ ೩ ಅಂಕಗಳು ದಾಖಲಾಗಿದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿಂದು ಅಮೆರಿಕನ್ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೮೫ ರೂಪಾಯಿ ೬೪ ಪೈಸೆಯಷ್ಟಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <><*<>**